ಮಕ್ಕಳು ಚಿಕ್ಕವರು. ಯಾರೋ ಅವರಿಗೆ ನಿಮ್ಮ ಬಗ್ಗೆ ಹೇಳಿದ್ದರು. ನೀವು ಮದುವೆ ಮಾಡಿಕೊಳ್ಳದೆ ತಮ್ಮ ತಂಗಿಯರನ್ನು ನೆಲೆ ಮುಟ್ಟಿಸಲು ಕಷ್ಟಪಡುತ್ತಿರುವುದು ಅವನಿಗೆ ಗೊತ್ತಾಗಿತ್ತು. ಅವನು ನಿಮ್ಮನ್ನು ಮದುವೆಯಾಗಲು ಬಯಸಿ ತನ್ನ ಅಕ್ಕನ ಮೂಲಕ ಹೇಳಿಕಳುಹಿಸಿದ್ದ. ನಿಮಗೆ ನೆನಪಿಲ್ಲವಾ?'

'ನಾನು ಮದುವೆಯಾಗಲ್ಲಾಂತ ಹೇಳಿ ಕಳುಹಿಸಿದ್ದೆ.'

'ಯಾಕೇಂತ ಕೇಳಬಹುದಾ?'

ಅವಳು ನಕ್ಕಳು.

'ಯಾಕೆ ನಗ್ತಿದ್ದೀರಾ?'

'ಸುಮಾರು 35 ವರ್ಷಗಳ ಹಿಂದಿನ ನನ್ನ ನಿರ್ಧಾರಕ್ಕೆ ಈಗ ಕಾರಣ ಹೇಳಬೇಕಾಗತ್ತೇಂತ ನನಗೆ ಗೊತ್ತಿರಲಿಲ್ಲ. ನಿಮ್ಮ ಫ್ರೆಂಡ್ ಯಾಕೆ ನನ್ನನ್ನು ಮದುವೆಯಾಗಲು ಬಯಸಿದ್ರು?'


'ಅವನ ಮಕ್ಕಳನ್ನು ನೀವು ಚೆನ್ನಾಗಿ ನೋಡಿಕೊಳ್ತೀರ ಎನ್ನುವ ನಂಬಿಕೆ ಅವರಿಗಿತ್ತು.'

'ಅವರಿಗೆ ಅವರದೇ ಆದ ನಿರೀಕ್ಷೆಗಳಿದ್ದಿರಬಹುದು. ಆದರೆ ನನಗೂ ನನ್ನದೇ ಆದ ನಿರೀಕ್ಷೆಗಳಿದ್ದವು.'

'ಆ ನಿರೀಕ್ಷೆಗಳ ಬಗ್ಗೆ ನಾನು ತಿಳಿದುಕೊಳ್ಳಬಹುದಾ?'

'ನಮ್ಮ ತಂದೆ ಟ್ರೆಷರಿಯಲ್ಲಿ ಗುಮಾಸ್ತರಾಗಿದ್ದರು. ತುಂಬಾ ಪ್ರಾಮಾಣಿಕ ವ್ಯಕ್ತಿ. ನನಗೆ ಇಬ್ಬರು ತಮ್ಮಂದಿರು. ಒಬ್ಬ ತಂಗಿ. ನಾನಾಗ ತಾನೆ ಬಿ.ಎಸ್ಸಿ. ಮುಗಿಸಿದ್ದೆ. ನಮ್ಮ ತಂದೆ ಇದ್ದಕ್ಕಿದ್ದಂತೆ ಹೃದಯಾಘಾತದಿಂದ ಹೋಗಿಬಿಟ್ಟರು. ಅವರ ಕೆಲಸ ನನಗೆ ಸಿಕ್ಕಿತು. ಜೊತೆಗೆ ಸಂಸಾರದ ಹೊಣೆಯೂ ನನ್ನ ಮೇಲೆ ಬಿತ್ತು. ನನ್ನ ವಯಸ್ಸಿನವರು ಮದುವೆ, ಒಡವೆ, ವಸ್ತ್ರದ ಬಗ್ಗೆ ಕನಸು ಕಾಣುತ್ತಿರುವಾಗ ನಾನು ಮನೆಗೆ ತರಬೇಕಾದ ಅಕ್ಕಿ, ಬೇಳೆ, ತರಕಾರಿ, ತಮ್ಮ ತಂಗಿಯರ ಫೀಸು, ಬಟ್ಟೆ–ಬರೆ ಬಗ್ಗೆ ಯೋಚಿಸ್ತಿದ್ದೆ.'

ಅವಳ ಕಣ್ಣುಗಳಲ್ಲಿ ತೆಳುವಾದ ನೀರಿನ ಪೊರೆಯನ್ನು ಅವನು ಗಮನಿಸಿದ.



'ತಮ್ಮಂದಿರು ಕೆಲಸಕ್ಕೆ ಸೇರಿ, ತಂಗಿಯ ಮದುವೆಯಾಗುವ ವೇಳೆಗೆ ನನಗೆ 35 ವರ್ಷ. ಜವಾಬ್ದಾರಿ ಹೊತ್ತು ನಾನು ಹೈರಾಣಾಗಿದ್ದೆ.'

ಅವನು ಮಾತಾಡಲಿಲ್ಲ.

'ನನ್ನನ್ನು ಮದುವೆಯಾಗುವ ವ್ಯಕ್ತಿ ನನ್ನನ್ನು ಸಂಪೂರ್ಣವಾಗಿ ನೋಡಿಕೊಳ್ಳಬೇಕು. ನನಗೆ ಯಾವ ಜವಾಬ್ದಾರಿಯನ್ನೂ ಕೊಡದೆ ತಾನೇ ಎಲ್ಲವನ್ನೂ ನಿರ್ವಹಿಸಬೇಕು ಎಂಬ ಕನಸು ಕಂಡಿದ್ದೆ. ನಿಮ್ಮ ಫ್ರೆಂಡ್‌ನ ಮದುವೆಯಾಗಿದ್ದರೆ ನಾನು ಹೊಸ ಜವಾಬ್ದಾರಿ ಹೊರಬೇಕಾಗುತ್ತಿತ್ತು. ನನ್ನ ಜೀವನ ಮುಳ್ಳಿನ ಮೇಲಿನ ನಡಿಗೆಯಾಗ್ತಿತ್ತು. ಅದಕ್ಕೆ ನಾನು ಮದುವೆಗೆ ಒಪ್ಪಲಿಲ್ಲ.'

'ನೀವು ಬಯಸಿದಂತಹ ಸಂಗಾತಿ ನಿಮಗೆ ಸಿಕ್ಕಿದ್ರಾ?'

'ನಾನು ಮದುವೆಯಾಗಲೇ ಇಲ್ಲ. ಅಮ್ಮ ನನ್ನ ಮದುವೆ ಪ್ರಯತ್ನ ಮಾಡುತ್ತಿರುವಾಗಲೇ ಕಾಯಿಲೆ ಬಿದ್ದರು. ಅದೇ ವೇಳೆ ನನ್ನ ತಂಗಿಯ ಗಂಡನ ಕೆಲಸ ಹೋಯ್ತು. ಅವರ ಸಂಸಾರದ ಜವಾಬ್ದಾರಿ ನನ್ನ ಮೇಲೆ ಬಿತ್ತು. ತಂಗಿಯನ್ನು ಬಿ.ಎಡ್.ಗೆ ಸೇರಿಸಿದೆ. ತಂಗಿಯ ಗಂಡನಿಗೆ ಒಂದು ಸಣ್ಣ ಅಂಗಡಿ ಹಾಕಿಕೊಟ್ಟೆ. ನನ್ನ ತಂಗಿ ಹಾಗೂ ಅವಳ ಗಂಡ ಬೇರೆ ಮನೆಗೆ ಹೋಗುವ ವೇಳೆಗೆ ನನಗೆ 40 ವರ್ಷಗಳಾಗಿದ್ದವು.'

'ನಿಮ್ಮನ್ನು ಏನೋ ಕೇಳಿ ನಿಮ್ಮ ಮನಸ್ಸನ್ನು ಘಾಸಿಗೊಳಿಸಿದೆ. ಐಯಾಮ್ ಸಾರಿ.'

'ನೀವು ಯಾಕೆ ಸಾರಿ ಕೇಳ್ತೀರಾ? ನನಗೆ ನಾನು ಅವಿವಾಹಿತೆಯಾಗಿಯೇ ಉಳಿದೆನಲ್ಲಾ... ಎನ್ನುವ ಬೇಸರವಿಲ್ಲ. ನನ್ನ ಮನೆ ನಂದಗೋಕುಲದಂತಿದೆ. ನನ್ನ ತಂಗಿ, ತಮ್ಮಂದಿರ ಮಕ್ಕಳು ನಮ್ಮನೆಯಲ್ಲೇ ಇದ್ದುಕೊಂಡು ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ ಬರವಣಿಗೆ ನನ್ನ ಮನಸ್ಸಿಗೆ ಮುದ ನೀಡುತ್ತದೆ. ಆತ್ಮೀಯ ಸ್ನೇಹಿತರ ಒಡನಾಟ ನನ್ನ ಬೇಸರ ತಣಿಸುತ್ತಿದೆ. ನಾನು ನೆಮ್ಮದಿಯಿಂದ ಇದ್ದೇನೆ.'

ರೈಲು ಬೆಂಗಳೂರು ಪ್ರವೇಶಿಸಿತು. ಅವಳು ಪರ್ಸ್‌ನಿಂದ ಲಗ್ನಪತ್ರಿಕೆ ತೆಗೆದು ಅವನ ಹೆಸರು ಬರೆದು ಅವನ ಕೈಗಿತ್ತು ಹೇಳಿದಳು. 'ಇದೇ ತಿಂಗಳ 22ನೇ ತಾರೀಕು ನನ್ನ ತಮ್ಮನ ಮಗನ ಮದುವೆ. ನೀವು ಖಂಡಿತಾ ಬರಬೇಕು.'

ಅವನು ಇಳಿಯುವ ಗಡಿಬಿಡಿಯಲ್ಲಿದ್ದ, ತನ್ನ ಕಿಟ್‌ಬ್ಯಾಗ್‌ಗಳನ್ನು ಜೋಡಿಸಿಕೊಂಡ. ಬೆಂಗಳೂರು ಸ್ಟೇಷನ್ ಬಂತು.

'ಬರ್ತೀನಿ ಮ್ಯಾಡಂ. ನಮಸ್ಕಾರ.'


'ನಮಸ್ಕಾರ.'

ಅವನು ಎರಡು ಹೆಜ್ಜೆ ಮುಂದಿಟ್ಟ.

'ಮಿಸ್ಟರ್ ಸಂತೋಷ್' ಅವಳು ಮೆಲುವಾಗಿ ಕೂಗಿದಳು. ಅವನು ಅಚ್ಚರಿಯಿಂದ ತಿರುಗಿ ನೋಡಿದ.

'ನಿಮ್ಮ ಬ್ಯಾಗ್ ಬಿಟ್ಟು ಹೋಗ್ತಿದ್ದೀರಲ್ಲ?'

ಬ್ಯಾಗ್ ತೆಗೆದುಕೊಳ್ಳಲು ಕೈಚಾಚಿದ ಅವನ ಮನದ ಮೂಲೆಯಲ್ಲಿ ಒಂದು ರೀತಿಯ ಅಪರಾಧಿ ಮನೋಭಾವ ಕಾಡುತ್ತಿತ್ತು. ■



# ತಪ್ಪಿಗೂ ಇರಲಿ ಅವಕಾಶ

**ಮಕ್ಕಳ ಓರೆಕೋರೆ ಗೆರೆಗಳಿಗೆ ಒಂದಷ್ಟು ಜಾಗ, ತಪ್ಪುಯಡವಟ್ಟುಗಳಿಗೆ ಸಾಕಷ್ಟು ಅವಕಾಶ ಕೊಡಬೇಕೆನ್ನುವುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕಿದೆ.**

■ ಸ್ವಯಂಪ್ರಭಾ

ಸುನಂದಾ ಬೆರಳುಗಳಲ್ಲಿ ರಂಗೋಲಿ ಮೂಡುವುದನ್ನು ನೋಡುವುದೇ ಒಂದು ಚಂದ. ಕೈಯಲ್ಲಿ ಬಿಳಿ ಹುಡಿ ಹಿಡಿದರೆ ಸಾಕು, ಸರ ಸರ ಅಂತ ಮಲ್ಲಿಗೆ ಮಾಲೆಯೊಂದು ಅರಳಿದಂತೆ ಮನೆಯ ಅಂಗಳವನ್ನು ಬೆಳಗಿಬಿಡುತ್ತಾಳೆ. ಅಕ್ಕಪಕ್ಕದ ಮನೆಯವರೆಲ್ಲ ಹೊಗಳುತ್ತಾರೆ. ಸುನಂದಾಳ ಗಂಡನ ಕಣ್ಣಲ್ಲೊಂದು ಬೆಳಕಿನಕೋಲು. ಹಬ್ಬ ಹರಿದಿನ ಇದ್ದಾಗಲಂತೂ ಆಕೆಯದು ಇನ್ನಷ್ಟು ಮುತುವರ್ಜಿ, ರಂಗೋಲಿ ರಂಗುರಂಗು. ಆದರೆ, ಸುನಂದಾಳ ಮಗಳು ಸುಹಾನಿಗೆ ರಂಗೋಲಿ ಕಂಡರಾಗದು. 'ಅಮ್ಮ ಎಷ್ಟು ಚಂದ ರಂಗೋಲಿ ಹಾಕ್ತಾಳೆ ನೋಡು. ನೀನೂ ಕಲಿ' ಎಂದು ಅಪ್ಪ ಹೇಳಿದರೆ, 'ನಂಗೆ ಇದೆಲ್ಲ ಚೂರೂ ಇಷ್ಟವಿಲ್ಲ ಪಪ್ಪಾ' ಎಂದು ಸುಹಾನಿ ಕಡ್ಡಿ ಮುರಿದಂತೆ ಹೇಳುತ್ತಾಳೆ. ಹಾಗೆಂದು ಅವಳಿಗೆ ರಂಗೋಲಿ ಇಷ್ಟವಿಲ್ಲ ಎಂದಲ್ಲ. ರಂಗೋಲಿ ಕಲಿಯುವುದು ಸುಹಾನಿಗೆ ಇಷ್ಟವೋ ಇಲ್ಲವೋ ಎಂದು ಕೇಳುವ ಪುರುಸೊತ್ತೇ ಮನೆಯಲ್ಲಿ ಯಾರಿಗೂ ಇಲ್ಲ.

ಪ್ರತಿ ರಂಗೋಲಿಗೂ ಸುನಂದಾಳಿಗೆ ಹೊಗಳಿಕೆ ಸಲ್ಲುತ್ತದೆ. ಪ್ರತಿ ಹಬ್ಬಕ್ಕೂ ಸಿಗುವ ರಜೆಯನ್ನು ಬಳಸಿಕೊಂಡು ಆಕೆ ಮನೆಯ ಮೂಲೆಯನ್ನು ಬಿಡದೇ ರಂಗೋಲಿ ಹಾಕಿಬಿಡುತ್ತಾಳೆ. ಸುಹಾನಿಯ ಓರೆಕೋರೆ ಗೆರೆಗಳಿಗೆ ಮನೆಯಲ್ಲಿ ಅವಕಾಶವೇ ಇಲ್ಲ. ಬೆಳಗೆದ್ದರೆ ಶಾಲೆಗೆ ಓಡು.